ಮಕ್ಕಳ ರಕ್ಷಣೆ ಕುರಿತಾದ ಕಾರ್ಯ ಯೋಜನೆಗಳು.

1438(1992); ಶ್ರೀ ಹ್ಯಾರಿಸ್ ಎನ್.ಎ

ಅ) ಮಕ್ಕಳ ರಕ್ಷಣೆ ಮತ್ತು ಹಿತರಕ್ಷಣೆಯೊಂದಿಗೆ ಅವರ ಸಮಗ್ರ ಅಭಿವೃದ್ಧಿಗಾಗಿ ಸರ್ಕಾರದ ಕಾರ್ಯಯೋಜನೆಗಳ ವಿವರಗಳೇನು;

ಆ) ಮಕ್ಕಳ ನಾಪತ್ತೆ ಪ್ರಕರಣಗಳು, ಬಡತನ ಮುಂತಾದ ಸಮಸ್ಯೆಗಳಿಂದ ಸಂಭವಿಸುತ್ತಿರುವ ಮಕ್ಕಳ ಮಾರಾಟ ಪ್ರಕರಣಗಳನ್ನು ನಿಯಂತ್ರಿಸಲು ಸರ್ಕಾರ ಜಾರಿಗೆ ತಂದಿರುವ ಪರಿಣಾಮಕಾರಿ ಕಾರ್ಯಕ್ರಮಗಳಾವುವು;

ಇ) ಮಕ್ಕಳ ಹಕ್ಕು ಸಂರಕ್ಷಣೆಯ ಬಗ್ಗೆ ಗ್ರಾಮಾಂತರ ಪ್ರದೇಶಗಳಲ್ಲೂ ಅರಿವು ಮೂಡಿಸುವ ಕಾರ್ಯಕ್ರಮಗಳ ಕುರಿತು ವಿವರಗಳು ಹಾಗೂ ಈ ಕ್ಷೇತ್ರದಲ್ಲಿ ಶ್ರಮಿಸುತ್ತಿರುವ ಅಧಿಕೃತ ಸ್ವಯಂಸೇವಾ ಸಂಸ್ಥೆಗಳ ವಿವರಗಳೇನು?

ಶ್ರೀಮತಿ ಉಮಾಶ್ರೀ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ, ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು)

ಅ) ಮಕ್ಕಳ ರಕ್ಷಣೆ ಮತ್ತು ಹಿತರಕ್ಷಣೆಗಾಗಿ ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿಯ ಮೂಲಕ ಸಮಗ್ರ ಮಕ್ಕಳ ರಕ್ಷಣಾ ಯೋಜನೆಯಡಿ ಬಾಲ ಮಂದಿರಗಳು, ವಿಶೇಷ ದತ್ತು ಸಂಸ್ಥೆಗಳು, ಪ್ರಾಯೋಜಿತ ಕಾರ್ಯಕ್ರಮ, ಅರ್ಹ ಸಂಸ್ಥೆಗಳು, ಮಕ್ಕಳ ತೆರೆದ ತಂಗುದಾಣ ಮುಂತಾದ ಕಾರ್ಯಯೋಜನೆಯನ್ನು ರೂಪಿಸಲಾಗಿದೆ,

ಆ)

1. ಬಾಲನ್ಯಾಯ (ಮಕ್ಕಳ ರಕ್ಷಣೆ ಮತ್ತು ಪೋಷಣೆ) ನಿಯಮಗಳು 2002 ನಿಯಮ 41ರ ಅನ್ವಯ ಕಾಣೆಯಾದ (ನಾಪತ್ತೆಯಾದ) ಮಕ್ಕಳನ್ನು ದಾಖಲೀಕರಿಸಲು ಮತ್ತು ಮಾಹಿತಿಯನ್ನು ಪ್ರಚಾರ ಮಾಡುವ ನಿಮಿತ್ತ ಇಲಾಖೆಯಲ್ಲಿ ಕಾಣೆಯಾದ ಮಕ್ಕಳ

ಬ್ಯೂರೋವನ್ನು ಸ್ವಯಂ ಸೇವಾ ಸಂಸ್ಥೆಯ ಸಹಕಾರದೊಂದಿಗೆ ಸ್ಥಾಪಿಸಲಾಗಿರುತ್ತದೆ.

2. ಸಂಕಷ್ಟದಲ್ಲಿ ಇರುವ ಮಕ್ಕಳ ಸಹಾಯಕ್ಕಾಗಿ ಉಚಿತ ದೂರವಾಣಿ ಸಂಖ್ಯೆ 1098 ಕ್ಕೆ ಕರೆಮಾಡಲು ಅವಕಾಶ ಕಲ್ಪಿಸಲಾಗಿರುತ್ತದೆ.

3. ಮಕ್ಕಳ ಅನೈತಿಕ ಸಾಗಾಣಿಕೆ/ಮಾರಾಟ ತಡೆಗಟ್ಟುವ ನಿಟ್ಟಿನಲ್ಲಿ ಜಿಲ್ಲಾ, ತಾಲ್ಲೂಕು ಮತ್ತು ಗ್ರಾಮ ಮಟ್ಟದಲ್ಲಿ ಕಾವಲು ಸಮಿತಿಗಳನ್ನು ರಚಿಸಲಾಗಿದೆ.

ಇ)

1. ಸಮಗ್ರ ಮಕ್ಕಳ ರಕ್ಷಣಾ ಯೋಜನೆಯಡಿ ಎಲ್ಲಾ ಜಿಲ್ಲೆಗಳಲ್ಲಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕಗಳನ್ನು ತೆರೆಯಲಾಗಿದೆ. ಈ ಘಟಕಗಳ ಮೂಲಕ ಮಕ್ಕಳ ಹಕ್ಕುಗಳ ರಕ್ಷಣೆ, ಬಾಲ್ಯ ವಿವಾಹ ನಿಷೇದ ಕಾಯ್ದೆ, ಬಾಲ ನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯ್ದೆ, 2000, ಹೆಣ್ಣು ಮಕ್ಕಳ ಲೈಂಗಿಕ ಶೋಷಣೆ ತಡೆ ಕಾಯ್ದೆ 2012 ಇತ್ಯಾದಿಗಳ ಬಗ್ಗೆ ಅರಿವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

2. ಜಿಲ್ಲಾ, ತಾಲ್ಲೂಕು ಹಾಗೂ ಗ್ರಾಮಮಟ್ಟದಲ್ಲಿ ಸಾರ್ವಜನಿಕರಿಗೆ ಅರಿವು ಮೂಡಿಸಲು ಸೈಕಲ್ ಜಾಥಾ, ಕಲಾ ಜಾಥಾ, ಬೀದಿ ನಾಟಕ ಮೆರವಣಿಗೆಗಳನ್ನೊಳಗೊಂಡ ಬೃಹತ್ ಆಂದೋಲನ, ಗೋಡೆ ಬರಹಗಳನ್ನು ಏರ್ಪಡಿಸಲಾಗಿದೆ. ಶಾಲಾ-ಕಾಲೇಜು ಮಕ್ಕಳಿಗೆ, ಮಕ್ಕಳ ಹಕ್ಕುಗಳ ಕ್ಲಬ್‌ಗಳಿಗೆ, ಅಂಗನವಾಡಿ ಕಾರ್ಯಕರ್ತೆಯರಿಗೆ, ಸ್ತ್ರೀ ಶಕ್ತಿ ಗುಂಪುಗಳಿಗೆ ಅರಿವು ಮೂಡಿಸಲಾಗಿರುತ್ತದೆ. ಮಹಿಳಾ ಅಭಿವೃದ್ಧಿ ಅಧಿಕಾರಿಗಳು, ನಿರೂಪಣಾಧಿಕಾರಿಗಳಿಗೆ, ಸ್ವಯಂ ಸೇವಾ ಸಂಸ್ಥೆಗಳ

ಪ್ರತಿನಿಧಿಗಳಿಗೆ ಮತ್ತು ಅಂಗನವಾಡಿ ತರಬೇತಿ ಕೇಂದ್ರದ ಮುಖ್ಯಸ್ಥರಿಗೆ ತರಬೇತಿಯನ್ನು ನೀಡಲಾಗಿರುತ್ತದೆ.

3. ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗವು ಮಕ್ಕಳ ಹಕ್ಕುಗಳ ವ್ಯಾಪಕ ಅರಿವು ಮೂಡಿಸಲು ಜಿಲ್ಲಾ/ವಿಭಾಗ ಮಟ್ಟದಲ್ಲಿ ಮಕ್ಕಳ ಹಕ್ಕುಗಳ ಅರಿವು ಕಾರ್ಯಾಗಾರಗಳನ್ನು ಏರ್ಪಡಿಸಲಾಗುತ್ತಿದೆ. ಅಲ್ಲದೇ ಆಯೋಗವು ಮಕ್ಕಳ ಹಕ್ಕುಗಳ ಕುರಿತು ಅರಿವು ಮೂಡಿಸಲು ರಾಜ್ಯದ ಶಾಲಾ ಮಕ್ಕಳಿಗೆ ಮಕ್ಕಳ ಹಕ್ಕುಗಳ ಮಾಹಿತಿಯನ್ನೊಳಗೊಂಡ "ಕಿರುಹೊತ್ತಿಗೆ" ಗಳನ್ನು ಸರಬರಾಜು ಮಾಡಲಾಗುತ್ತಿದೆ.

ಮಕ್ಕಳ ಹಕ್ಕುಗಳು ಮತ್ತು ಶಿಕ್ಷಣ ಹಕ್ಕುಗಳ ಮಾಹಿತಿಯನ್ನೊಳಗೊಂಡ ಪೋಸ್ಟರ್ಸ್‌ಗಳನ್ನು ರಾಜ್ಯದ ಶಾಲೆಗಳಿಗೆ ಮತ್ತು ಗ್ರಾಮ ಪಂಚಾಯಿತಿಗಳಿಗೆ ಸರಬರಾಜು ಮಾಡಲಾಗುತ್ತಿದೆ. ಇದರಿಂದ ಗ್ರಾಮಾಂತರ ಪ್ರದೇಶಗಳಲ್ಲಿ ಜಾಗೃತಿ ಉಂಟಾಗುತ್ತಿದೆ.

ಸ್ವಯಂ ಸೇವಾ ಸಂಸ್ಥೆಗಳ ಪಟ್ಟಿಯನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ಶ್ರೀ ಹ್ಯಾರಿಸ್ ಎನ್.ಎ, ವಿಧಾನ ಸಭೆ ಸದಸ್ಯರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1992ಕ್ಕೆ

ಅನುಬಂಧ

ಅರಿವು ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿರುವ ಸಂಸ್ಥೆಗಳು

1. ಸಾಥಿ, ಸಂಖ್ಯೆ. 4, ವಿ.ಪಿ.ಎಸ್.ನಿಲಯಂ, 1ನೇ ಮಹಡಿ, 1ನೇ ಮುಖ್ಯ ರಸ್ತೆ, 2ನೇ ಹಂತ, ಗಣೇಶ ದೇವಸ್ಥಾನದ ಹತ್ತಿರ, ಓಕಳಿಪುರಂ, ಬೆಂಗಳೂರು–560021

2. ಬಾಸ್ಕೋ, ನಂ. 91, ಬಿ, ಸ್ಟ್ರೀಟ್, 6ನೇ ಅಡ್ಡರಸ್ತೆ, ಗಾಂಧಿನಗರ, ಬೆಂಗಳೂರು–560009

3. ಬೈಲ್ಡ್ ರೈಟ್ ಟ್ರಸ್ಟ್, 4606, 6ನೇ ಮಹಡಿ, ಹೈ ಪಾಯಿಂಟ್ ಕಟ್ಟಡ, 45, ಪ್ಯಾಲೇಸ್ ರಸ್ತೆ, ಚಾಲುಕ್ಯ ಹೋಟೆಲ್ ಹತ್ತಿರ, ಬೆಂಗಳೂರು–560001

4. ಅಪ್ನಾ, ನಂ. 34, ಅಣ್ಣಸಂದ್ರ ಪಾಳ್ಯ, ವಿಮಾನಪುರ ಅಂಚೆ, ಬೆಂಗಳೂರು–560017

5. ಸೆಂಟರ್ ಫಾರ್ ರೂರಲ್ ಡೆವಲಪ್‌ಮೆಂಟ್, ಪ್ರಶಾಂತ್ ನಿಲಯ, ಜೈಲ್ ಹಿಂಭಾಗ, ಅರಣ್ಯ ವಸತಿ ಗೃಹಗಳ ಪಕ್ಕ, ಪಾರ್ವತಿ ನಗರ ಮುಖ್ಯ ರಸ್ತೆ, ಬಳ್ಳಾರಿ–583101..

6. ರೂರಲ್ ಎಜುಕೇಷನ್ & ಆಕ್ಷನ್ ಡೆವಲಪ್‌ಮೆಂಟ್, 3.6/ಎ, 1ನೇ ಮಹಡಿ, ಮಾದುರಿ ನರ್ಸಿಂಗ್ ಹೋಂ ಎದುರು, ಮೊಕಾ ರಸ್ತೆ, ಗಾಂಧಿನಗರ, ಬಳ್ಳಾರಿ ಜಿಲ್ಲೆ– 583103.

7. ಪ್ರಚೋದನಾ (ಸೆಂಟರ್ ಫಾರ್ ಸೋಶಿಯಲ್ ಸರ್ವಿಸ್), ಗುಡ್ಡನಹಳ್ಳಿ, ಜೆ.ಹೆಚ್. ಕೆರೆ ಅಂಚೆ, ವಿಜಯನಗರ, ಬೇಲೂರು ರಸ್ತೆ, ಹಾಸನ – 573201

8. ಬಿ.ಡಿ.ಎಸ್.ಎಸ್, ಸೊಸೈಟಿ, ಸೇವಾಲಯ, ಡಾ॥ ದ.ರಾ. ಬೇಂದ್ರೆ ರಸ್ತೆ, ಸಾಧನಕೇರಿ, ಧಾರವಾಡ–580008.

ಕರ್ನಾಟಕ ಗ್ರಾಮ ಪಂಚಾಯತ್ ರಾಜ್ ಕಾಯ್ದೆಗೆ ತಿದ್ದುಪಡಿ

1439 (1993); ಶ್ರೀ ಹ್ಯಾರೀಸ್ ಎನ್.ಎ. (ಶಾಂತಿನಗರ)

ಅ) 1993ರಲ್ಲಿ ರಾಜ್ಯದಲ್ಲಿ ಅನುಷ್ಠಾನಗೊಂಡ ಕರ್ನಾಟಕ ಗ್ರಾಮ ಪಂಚಾಯತ್ ರಾಜ್ ಕಾಯ್ದೆಗೆ ತಿದ್ದುಪಡಿ ತರುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ(ವಿವರ ನೀಡುವುದು);

ಆ) ಪಂಚಾಯತ್ ರಾಜ್ ವ್ಯವಸ್ಥೆಯ ಮೂಲಕ ಅಧಿಕಾರ ವಿಕೇಂದ್ರೀಕರಣ ವ್ಯವಸ್ಥೆಯನ್ನು ಜಾರಿಗೆ ತಂದ ಸದರಿ ಕಾಯ್ದೆಯನ್ನು ತಿದ್ದುಪಡಿ ಮಾಡುವ ಕುರಿತಾಗಿ ಸರ್ಕಾರ ಕೈಗೊಂಡ ಕ್ರಮಗಳೇನು;

ಇ) ಪ್ರಸ್ತುತ ಇರುವ ಕಾಯ್ದೆಯಲ್ಲಿನ ಲೋಪದೋಷಗಳು ಮತ್ತು ಬದಲಾದ ಕಾಲಗತಿಗೆ ಅನ್ವಯವಾಗುವಂತೆ ಅಳವಡಿಸಲು ರಚಿಸಿರುವ ಸಮಿತಿ ಕಾರ್ಯವ್ಯಾಪ್ತಿಯ ವಿವರಗಳೇನು?

ಶ್ರೀ ಹೆಚ್.ಕೆ. ಪಾಟೀಲ್ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಅ) ಹೌದು: ಮಾಜಿ ವಿಧಾನ ಸಭಾ ಅಧ್ಯಕ್ಷರು ಹಾಗೂ ಪ್ರಸ್ತುತ ವಿಧಾನ ಸಭಾ ಸದಸ್ಯರಾದ ಶ್ರೀ ಕೆ.ಆರ್. ರಮೇಶ್‌ಕುಮಾರ್ ರವರ ಅಧ್ಯಕ್ಷತೆಯಲ್ಲಿ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ಕ್ಕೆ ತಿದ್ದುಪಡಿ ಸೂಚಿಸಲು ಸಮಿತಿಯನ್ನು ರಚಿಸಲಾಗಿದೆ.

ಆ) ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ 1993ರನ್ನು ಸಮಗ್ರವಾಗಿ ಪರಿಶೀಲಿಸಲು ಹಾಗೂ ಗುಣಾತ್ಮಕ ಬದಲಾವಣೆಗೆ ತಿದ್ದುಪಡಿ